# ಕರ್ನಾಟಕ ವಿಧಾನ ಪರಿಷತ್ತು

| | | | |
|---|---|---|---|
| 1. | ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 1051 |
| 2. | ಸದಸ್ಯರ ಹೆಸರು | : | ಶ್ರೀ ಹೆಚ್.ಪಿ. ಸುಧಾಮ್ ದಾಸ್ |
| 3. | ಉತ್ತರಿಸುವ ದಿನಾಂಕ | : | 25.07.2024 |
| 4. | ಉತ್ತರಿಸುವ ಸಚಿವರು | : | ಮುಖ್ಯಮಂತ್ರಿಗಳು |

<table>
<tr><th>ಪ್ರಶ್ನೆ ಸಂಖ್ಯೆ</th><th>ಪ್ರಶ್ನೆ</th><th>ಉತ್ತರ</th></tr>
<tr><td>ಅ)</td><td>ಪ್ರಜಾವಾಣಿ, ಇಂಡಿಯನ್ ಎಕ್ಸ್‌ಪ್ರೆಸ್, ಡೆಕ್ಕನ್ ಹೆರಾಲ್ಡ್, ಟೈಮ್ಸ್ ಆಫ್ ಇಂಡಿಯ, ಹಿಂದುಸ್ಥಾನ್ ಟೈಮ್ಸ್ ಹಾಗೂ ಇನ್ನಿತರ ಪ್ರಮುಖ ಪತ್ರಿಕೆಗಳ ದಿನಾಂಕ: 12.10.2021ರ ವರದಿ ಅನ್ವಯ ಮಾಜಿ ಮುಖ್ಯಮಂತ್ರಿಯವರ ಆಪ್ತರ ಮನೆ ಕಛೇರಿ ಹಾಗೂ ವ್ಯವಹಾರ ಸಂಸ್ಥೆಗಳ ಮೇಲೆ ದಾಳಿ ನಡೆಸಲಾಗಿದ್ದು, ಅಂದಾಜು 750 ಕೋಟಿಗೂ ಹೆಚ್ಚು ಮೊತ್ತದ ಅನಧಿಕೃತ ವ್ಯವಹಾರಕ್ಕೆ ಸಂಬಂಧಿಸಿದ ಹಣ ಹಾಗೂ ದಾಖಲೆಗಳನ್ನು ವಶಪಡಿಸಿಕೊಳ್ಳಲಾಗಿದ್ದು, ಇವರ ವಿರುದ್ಧ ಅಂದಿನ ಎ.ಸಿ.ಬಿ.ಯಲ್ಲಿ ಭ್ರಷ್ಟಾಚಾರ ವಿರೋಧ ಕಾಯ್ದೆ ಅಡಿ ದಾಖಲೆಯಾಗಿರುವ ಪ್ರಕರಣದ ವಿವರವೇನು:</td><td>ಮಾನ್ಯ ಉಚ್ಛ ನ್ಯಾಯಾಲಯವು ರಿಟ್ ಅರ್ಜಿ ಸಂಖ್ಯೆ: 19386/2016 ರಲ್ಲಿ ದಿನಾಂಕ: 11.8.2022 ರಂದು ನೀಡಿರುವ ತೀರ್ಪಿನ ಅನುಷ್ಠಾನದ ಸಂಬಂಧ ಸರ್ಕಾರಿ ಆದೇಶ ಸಂಖ್ಯೆ: ಸಿಆಸುಇ 76 ಸೇಲೋಯು 2016 (ಭಾ-2) ದಿನಾಂಕ : 09.09.2022 ರನ್ವಯ ಭ್ರಷ್ಟಾಚಾರ ನಿಗ್ರಹ ದಳವನ್ನು ರದ್ದುಗೊಳಿಸಿ ಆದೇಶಿಸಲಾಗಿದೆ. ಆದ್ದರಿಂದ ಭ್ರಷ್ಟಾಚಾರ ನಿಗ್ರಹ ದಳದಲ್ಲಿ ದಾಖಲಾಗಿದ್ದ ದೂರು / ಪ್ರಕರಣಗಳನ್ನು ಕರ್ನಾಟಕ ಲೋಕಾಯುಕ್ತ ಸಂಸ್ಥೆಗೆ ವರ್ಗಾಯಿಸಲಾಗಿರುತ್ತದೆ.<br><br>ಮುಂದುವರೆದು, ಕರ್ನಾಟಕ ಲೋಕಾಯುಕ್ತ ಸಂಸ್ಥೆಯ ಪೊಲೀಸ್ ವಿಭಾಗದಲ್ಲಿ ಲಭ್ಯವಿರುವ ದಾಖಲೆಗಳನ್ನು ಪರಿಶೀಲಿಸಲಾಗಿ, ಯಾವುದೇ ಪ್ರಕರಣಗಳು ದಾಖಲಾಗಿರುವುದಿಲ್ಲ.</td></tr>
<tr><td>ಆ)</td><td>ಅಂದಿನ ಎ.ಸಿ.ಬಿ. ಮುಖ್ಯಸ್ಥ ಹೆಸರು ಹಾಗೂ ಸದರಿ ಅಧಿಕಾರಿಯು ಪ್ರಸ್ತುತ ಯಾವ ಸ್ಥಳದಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದಾರೆ.</td><td rowspan="2">ಮೇಲೆ (ಅ) ರಲ್ಲಿ ನೀಡಿರುವ ಉತ್ತರದಿಂದಾಗಿ ಈ ಪ್ರಶ್ನೆ ಉದ್ಭವಿಸುವುದಿಲ್ಲ.</td></tr>
<tr><td>ಇ)</td><td>ಸದರಿಯವರ ಬಿ.ಎಂ.ಡಿ.ಸಿ. ಸಿಬ್ಬಂದಿಯಾಗಿದ್ದು, ಅವರ ವಿರುದ್ಧ ಭ್ರಷ್ಟಾಚಾರ ವಿರೋಧಿ ಕಾಯ್ದೆ ಅಡಿ ಪ್ರಕರಣ ದಾಖಲಾಗದ ಪಕ್ಷದಲ್ಲಿ, ಇಂದಿನ ಸರ್ಕಾರದ ಅವಧಿಯಲ್ಲಿ ಸದರಿ ವ್ಯಕ್ತಿಯ ವಿರುದ್ಧ ಭ್ರಷ್ಟಾಚಾರ ವಿರೋಧ ಕಾಯ್ದೆ ಅಡಿ ಪ್ರಕರಣ ದಾಖಲಿಸಲು ಯಾವುದಾದರೂ ಕಾನೂನಿನ ಅಡೆತಡೆ ಇದೆಯೇ? (ನಿರ್ದಿಷ್ಟವಾಗಿ ತಿಳಿಸುವುದು)</td></tr>
</table>

**ಸಂಖ್ಯೆ:ಸಿಆಸುಇ 134 ಸೇಲೋಯು 2024.**

(ಸಿದ್ದರಾಮಯ್ಯ)
**ಮುಖ್ಯಮಂತ್ರಿ**